ಕಥೆ

# ಪತನ



**ರವಿರಾಜ ಬೈಕಂಪಾಡಿ**

ಕಲೆ: ವಿಶ್ವನಾಥ್ ಎ.ಎಸ್

ನಾಂಗಾಲ ಗ್ರಾಮದ ಕಿಸಾ ತಮ್ಮಯ್ಯನ ಪ್ರಕರಣವು ಕರಮಚಂದ ಭೇದಿಸಿದ ರೋಚಕ ಪ್ರಕರಣಗಳಲ್ಲೊಂದು. ಅದು ನಡೆದಿದ್ದು ಡಿಸೆಂಬರ್ ತಿಂಗಳ ಒಂದು ರಾತ್ರಿ.

ಗಾಢ ನಿದ್ದೆಯಲ್ಲಿದ್ದ ನನಗೆ ಕರೆಗಂಟೆಯ ಸದ್ದು ಕಿವಿಗಪ್ಪಳಿಸಿದಂತಾಗಿ ಎದ್ದೆ. ಗೋಡೆಯಲ್ಲಿದ್ದ ಗಡಿಯಾರ ಒಂದೂವರೆ ತೋರುತ್ತಿತ್ತು. ಈ ಅಪರಾತ್ರಿಯಲ್ಲಿ ಬಂದವರಾರು ಎಂಬ ಗೊಂದಲದಲ್ಲಿದ್ದಾಗ ಕರಮಚಂದನ ದನಿ ತೂರಿಬಂತು.

'ಯಾರದು? ಯಾರು ಬೇಕಿತ್ತು?' ಹಜಾರಕ್ಕೆ ಬಂದಾಗ, ಕರಮಚಂದ ಬಾಗಿಲಿನ ಪೀಹೋಲ್ ಕ್ಯಾಮೆರಾದಲ್ಲಿ ಕಣ್ಣು ಹುದುಗಿಸಿದ್ದ. ಹೊರಗಿದ್ದಾತನ ಮಾತುಗಳು ಸ್ಪೀಕರಿನಲ್ಲಿ ಕೇಳಿಸಿತು, 'ಸಾರ್, ನಾನು ಕಿಸಾ ತಮ್ಮಯ್ಯ. ನಾಂಗಾಲದವನು. ನಾನೀಗ ದೊಡ್ಡ ಅಪಾಯದಲ್ಲಿದ್ದೀನಿ. ಪೊಲೀಸರು ನನ್ನ ಹಿಂದೆ ಬಿದ್ದಿದ್ದಾರೆ. ಯಾವ ಕ್ಷಣಕ್ಕಾದರೂ, ನನ್ನ ಬಂಧನವಾಗಬಹುದು. ನನ್ಗೆ ಕರಮಚಂದರ ಸಹಾಯ ತೀರಾ ಅಗತ್ಯವಾಗಿದೆ.' ಕರಮಚಂದ ಬಾಗಿಲು ತೆರೆದಾಗ, ಯುವಕನೊಬ್ಬ ವೇಗವಾಗಿ ಒಳ ನುಗ್ಗಿದ. 'ನಿಮ್ಮ ಮೇಲೆ ಭರವಸೆ ಇಟ್ಟು ಬಂದಿದ್ದೇನೆ. ನಾನು ಕೊಲೆ ಮಾಡಿಲ್ಲ. ಅವ್ನೇ ಕೆಳಗೆ ಹಾರಿದ್ದು. ಆತ್ಮಹತ್ಯೆ ಮಾಡ್ಕೊಂಡ' ಒಂದೇ ಉಸಿರಿನಲ್ಲಿ ಹೊರ ಬಿದ್ದವು ಪದಗಳು. 'ತಮ್ಮಯ್ಯ, ಏನಾಯಿತು ಎನ್ನುವುದನ್ನು ವಿವರವಾಗಿ ಹೇಳು.' ಆತ ತನ್ನ ಪ್ರವರ ಬಿಚ್ಚಿಟ್ಟ.

ಆತ್ಮಹತ್ಯೆ ಮಾಡಿಕೊಂಡ ಎನ್ನಲಾದ ವ್ಯಕ್ತಿಯ ಹೆಸರು ಎಡಕೇರಿ ಪ್ರವೀಣ. ತಮ್ಮಯ್ಯನ ವ್ಯವಹಾರದಲ್ಲಿ ಪಾಲುದಾರನಾಗಿದ್ದವನು. ಹಣಕಾಸಿನ ವಿಚಾರದಲ್ಲಿ ಉಂಟಾದ ವೈಮನಸ್ಸು ಪಾಲುದಾರಿಕೆಗೆ ಅಂತ್ಯ ಹಾಡಿತು. ಇಬ್ಬರ ನಡುವಿನ ಕಂದಕವನ್ನು ಇನ್ನಷ್ಟು ಆಳವಾಗಿಸಿದ್ದು ಬಡುವಂಡ ತ್ರಿಶಾಲಿ. ಒಂದು ಕಾಲಕ್ಕೆ ಪ್ರವೀಣನ ಪ್ರೇಯಸಿಯಾಗಿದ್ದ ಹುಡುಗಿ ನಂತರ ತಮ್ಮಯ್ಯನ ಹಿಂದೆ ಬಿದ್ದಿದ್ದಳು! ಅದರಿಂದಾಗಿ ಹಾವು ಮುಂಗುಸಿಯಂತಾದ ಅವರು ಒಂದೆರಡು ಬಾರಿ ಕೈ ಕೈ ಮಿಲಾಯಿಸಿದ್ದಿದೆ. ಮುಖ್ಯವಾದ ವಿಷಯವೊಂದರ ಬಗ್ಗೆ ಮಾತಾಡಲು, ತಮ್ಮಯ್ಯ ವಾಸವಿದ್ದ ಕಾವೇರಿ ವಸತಿ ಸಂಕೀರ್ಣದ ತಾರಸಿಗೆ, ರಾತ್ರಿ ಹತ್ತು ಗಂಟೆಗೆ ಬರುವೆನೆಂದು ವಾಟ್ಸಾಪ್‌ನಲ್ಲಿ ಪ್ರವೀಣ ಸಂದೇಶ ಕಳಿಸಿದ್ದನಂತೆ. ಆದರೆ ನಂತರ ಕರೆ ಮಾಡಿ, ಹತ್ತರ ಬದಲಿಗೆ ಎಂಟು ಗಂಟೆಗೇ ಬರುವುದಾಗಿ ತಿಳಿಸಿದ್ದ. ತಮ್ಮಯ್ಯ ರಾತ್ರಿ ಎಂಟೂ ಕಾಲಿಗೆ ತಾರಸಿಗೆ ಹೋಗಿದ್ದ. ಅಲ್ಲಿ ಕಾಯುತ್ತಿದ್ದ ಪ್ರವೀಣನು ತ್ರಿಶಾಲಿಯ ವಿಷಯ ತೆಗೆದು ಜಗಳ ಮಾಡತೊಡಗಿದ. ತಮ್ಮಯ್ಯನೂ ಏರುದನಿಯಲ್ಲಿ ಮಾತಾಡಿದ. ಪ್ರವೀಣ ತಮ್ಮಯ್ಯನನ್ನು ಕೆಳಗೆ ತಳ್ಳಲೋ ಎಂಬಂತೆ ಕಟಕಟೆಯತ್ತ ಎಳೆಯತೊಡಗಿದನಂತೆ. ನಂತರ ಏಕಾಏಕಿ, ಮಾನಸಿಕ ಸ್ಥಿಮಿತ ಕಳಕೊಂಡವನಂತೆ, ಹಿಮ್ಮುಖವಾಗಿ ತಾರಸಿಯಿಂದ ಕೆಳಕ್ಕೆ ಜಿಗಿದನಂತೆ. ಆರು ಅಂತಸ್ತುಗಳ ಕಟ್ಟಡವದು. ಕೆಳಗಡೆ ಇಂಟರ್ ಲಾಕ್ ಹಾಸಿದ